ಕಥೆ

# ಡೇರೆಗೆ ಬಿದ್ದ ಚಂದಿರ



**ಪ್ರಸಾದ ಶೆಣೈ ಆರ್.ಕೆ.**

ಕಲೆ: ರೂಪಶ್ರೀ ಕಲ್ಲಿಗನೂರು

‘ಗಜಮುಖದವಗೆ ಗಣಪಗೆ’ ಎಂದು ಭಾಗವತರು ಗಣಪತಿ ಸ್ತುತಿ ಶುರುಮಾಡಿದಾಗ ಅಲ್ಲೆಲ್ಲೋ ಅಂಬೊಡೆ ಮುಕ್ಕುತ್ತಿದ್ದವರು, ಅಂಬೊಡೆಯವನು ಜಾದು ಮಾಡುವವನಂತೆ ಹೇಗೆ ನೀರುಳ್ಳಿ, ಬಟಾಟೆ ಕಟ ಕಟ ಕಟ ಕೊಚ್ಚುತ್ತಾನೆ ಎಂದು ಕಣ್ಣರಳಿಸಿ ನೋಡುತ್ತಿದ್ದವರು, ಬಾಲ್ಯದಲ್ಲಿ ತಾನು ಕಣ್ಣು ಹೊಡೆದಿದ್ದ ಸರೋಜಾ ಇವತ್ತು ಎಷ್ಟು ದೊಡ್ಡವಳಾಗಿ ಅವಳಿ ಮಕ್ಕಳಿಗೆ ಬಣ್ಣದ ಬಲೂನು ಕೊಡಿಸುತ್ತಿದ್ದಾಳಲ್ಲ, ಅವಳ ಮಕ್ಕಳು ಅವಳಂತೆ ಇದ್ದಾವಾ? ಅವಳ ಆ ಗುಳಿಕೆನ್ನೆ ಇನ್ನೂ ಮಾದಕವಾಗಿದೆಯಾ ಎಂದು ಅದೇ ಆಟದ ಪೂರ್ವಭಾವಿ ತಾಲೀಮು ಎನ್ನುವಂತೆ ಅವಳನ್ನೇ ಮೈಯೆಲ್ಲಾ ಕಣ್ಣಾಗಿ ತುಂಬಿಸಿಕೊಳ್ಳುತ್ತಿದ್ದ ಅಪ್ಪು ನಾಯ್ಕರ ಮಗ ನಾಗೇಶ, ಸಾರ್ವಜನಿಕ ಅನ್ನ ಸಂತರ್ಪಣೆ ಸಿಕ್ಕಿದ್ದೇ ಚಾನ್ಸು ಎಂದು ಕಡ್ಲೇಬೇಳೆ ಪಾಯಸಕ್ಕೆ ಹಾಕಿದ್ದ ಗೋಡಂಬಿಯನ್ನು ಹುಡುಕಿ ಹುಡುಕಿ ತಿನ್ನುತ್ತಿದ್ದವರು, ಆಟ ಶುರುವಾದ ಮೇಲೆ ಬಂದ್ರಾಯ್ತು ಎಂದು ಅಲ್ಲೆಲ್ಲೋ ನಿಂತು ಯಾರ್‍ಯಾರ ಜೊತೆಗೋ ಪಂಚಾಯಿತಿಕೆ ಮಾಡುತ್ತಿದ್ದವರು, ಇವರೆಲ್ಲರೂ ಗಣಪತಿ ಸ್ತುತಿ ಕೇಳಿದ್ದೇ ತಡ, ಆಟ ಶುರುವಾಯ್ತು ಅನ್ನೋ ಪ್ರಚಂಡ ಧಾವಂತದಲ್ಲಿ ತಮ್ಮ ತಮ್ಮ ಚಟುವಟಿಕೆಗಳಿಂದ ಕಳಚಿಕೊಂಡು ಡೇರೆ ಅನ್ನೋ ಮಾಯಾಲೋಕದೊಳಗೆ ಸೇರಿಕೊಂಡರು.

‘ನಾನು ಈ ಸಲ ಊರಲ್ಲಿ ಹಾಲೂರು ಮೇಳದಿಂದ ಐತಿಹಾಸಿಕ ಆಟ ಆಡಿಸ್ತೆ’ ಎಂದು ಕೆಲವು ತಿಂಗಳುಗಳಿಂದ ಆಗುಂಬೆಯಿಂದ- ಹೆಬ್ರಿ ಆಸುಪಾಸಿನ ಊರಲ್ಲೆಲ್ಲಾ ಹೇಳುತ್ತಲೇ ಬಂದಿದ್ದ ಅಣ್ಣಪ್ಪ ನಾಯಕರು ಕೊನೆಗೆ ಆಟದ ದಿನಾಂಕವನ್ನೂ ಗೊತ್ತು ಮಾಡಿ, ಬಡಗುತಿಟ್ಟಿನ ಸಾಂಪ್ರದಾಯಿಕ ಪ್ರತಿಷ್ಠಿತ ಗಜಗಟ್ಟಿಮೇಳ ‘ವಕ್ರತುಂಡೇಶ್ವರ ಪ್ರಸಾದಿತ ಯಕ್ಷಗಾನ ಮೇಳ, ಹಾಲೂರು’ ಅವರಿಂದ ಜನಪ್ರಿಯ ಆಕರ್ಷಕ ಐತಿಹಾಸಿಕ ಪ್ರಸಂಗ ‘ಗಗನಮುಖಿ ಸೂರ್ಯಸಖಿ’ ನಿಮ್ಮ ಕುಚ್ಚೂರಿನಲ್ಲಿ, ಕುಚ್ಚೂರು ಕುಟುಂಬಸ್ಥರಿಂದ ಆಟ’ ಎಂದು ಬ್ಯಾನರ್ ಮಾಡಿಸಿ, ಆಗುಂಬೆ, ಸೋಮೇಶ್ವರ, ಮಡಾಮಕ್ಕಿ, ಸೀತಾನದಿ, ಮುದ್ರಾಡಿ, ಅಜೆಕಾರ್, ಕಾರ್ಕಳದವರೆಗೂ ಹಾಕಿಸಿದ್ದರು. ಇದ್ದ ಬದ್ದ ವಾಟ್ಸಾಪ್ ಗುಂಪು, ತನ್ನ ಪ್ರತಿಷ್ಠಿತ ಸ್ನೇಹಿತರು, ಗುರ್ತು ಪರಿಚಯ ಇಲ್ಲದ ಯಕ್ಷಗಾನದ ಗಂಧಗಾಳಿ ಇಲ್ಲದವರಿಗೂ ಆಟಕ್ಕೆ ಬನ್ನಿ ಬನ್ನಿ ಎಂದು ಎಲೆಗೆ ಸುಣ್ಣ ಹಚ್ಚುವವರಂತೆ ಫೋನು ಹಿಡಿದು ಕಳಿಸಿ ಕಳಿಸಿ ವಿನಂತಿಸಿದ್ದರು. ಅವರ ಜನಪ್ರಿಯತೆಯೋ, ಅವರ ಆಹ್ವಾನಕ್ಕೋ, ಅಥವಾ ಆಟ ಶುರುವಾಗುವ ಮೊದಲು ಅವರು ಹಾಕಿಸುವ ಪುಷ್ಕಳ ಭೋಜನದ ವಿಶೇಷ ಆಕರ್ಷಣೆಗಳಾದ